ತೀವ್ರ ಮಟ್ಟದಲ್ಲಿ ಚಿಕಿತ್ಸೆಗೆ ಒಳಗಾಗಿಬಿಡುತ್ತದೆ. ಕೆಲವನ್ನು ಮಾತ್ರ ಹೆಸರಿಸುವುದಾದರೆ, 'ರೊಟ್ಟಿ', 'ಸಹಪಾಠಿ', 'ಮಾರಲಾಗದ ನೆಲ' ಇತ್ಯಾದಿ ಕಥೆಗಳನ್ನು ನೆನಪಿಸಿಕೊಳ್ಳಬಹುದು. ಇಲ್ಲಿ ಲಂಕೇಶರು ಸಮಕಾಲೀನ ಕರ್ನಾಟಕದ ಗ್ರಾಮರಾಜಕಾರಣ ಮತ್ತು ಸೂಕ್ಷ್ಮ ಮನಸ್ಸಿನ ತಿಕ್ಕಾಟಗಳನ್ನು ಸರಿಯಾಗಿ ಅರಿತಿದ್ದರು ಎಂದು ಕಾಣುತ್ತದೆ.

ನಿರಂಜನ ಅವರ 'ಕೊನೆಯ ಗಿರಾಕಿ' ಮತ್ತು ಲಂಕೇಶರ 'ಗುತ್ತಿ ಗೀತಾ ಆದದ್ದು' ಎರಡೂ ಕಥೆಗಳ ವಿನ್ಯಾಸ, ವಸ್ತುವನ್ನು ನಿರ್ವಹಿಸುವ ಬಗೆಯನ್ನು ನೋಡಿದರೆ ಲಂಕೇಶರು ಪ್ರಗತಿಶೀಲರ ಕಥನದ ಮಿತಿಗಳನ್ನು ಸರಿಯಾಗಿ ಅರಿತಿದ್ದರು. ಹಾಗಂತ ಸಂಪೂರ್ಣವಾಗಿ ಪ್ರಗತಿಶೀಲ ಕಥೆಗಳನ್ನು ಬುಡಮಟ್ಟ ನಿರಾಕರಿಸುವುದೂ ನಮ್ಮ ದಡ್ಡತನವೇ ಆಗುತ್ತದೆ. ಅಲ್ಲಿ 'ಅವಸರ', 'ಅತಿ ಭಾವುಕತೆ' ಕಥನದ ಶಕ್ತಿಯನ್ನು ಕುಗ್ಗಿಸಿದವು. ಆದರೆ, ಅವರು ವಸ್ತುವನ್ನು ಆಯ್ಕೆ ಮಾಡಿಕೊಂಡಿದ್ದು ಈ ನೆಲದ ಕಸುವಿನ ಶಕ್ತಿಯಿಂದಲೇ ಎನ್ನುವುದನ್ನು ಮರೆಯಬಾರದು. ಚಾರಿತ್ರಿಕವಾಗಿ ಪ್ರಗತಿಶೀಲರಲ್ಲಿ 'ಮಾರ್ಕ್ಸ್‌ವಾದ' ಕೆಲಸ ಮಾಡಿದೆ ಎಂಬ ಚರ್ಚೆ ಭರದಿಂದ ಸಾಗಿದ್ದರೂ, ಕ್ರಮೇಣ ಅನಕೃ, ತರಾಸು ಮುಂತಾದವರಲ್ಲಿ ಕುಗ್ಗಿತು. ಆಗಲೇ ಹೇಳಿದ ಹಾಗೆ, ಕಲಾತ್ಮಕ ಪ್ರಕಾರಗಳಿಗೆ ಅನ್ಯದೇಶಗಳ ಥಿಯರಿಗಳ ಸತ್ವವನ್ನು ಎಷ್ಟರ ಮಟ್ಟಿಗೆ ಹೇಗೆ ನುಗ್ಗಿಸಬೇಕು ಎಂಬುದರ ಅರಿವಿಲ್ಲದೇ ಹೋದಾಗ ಯಾವುದೇ ಬರಹ ಒಣ ತರ್ಕವಾಗಿ ಇರುತ್ತದೆ. ಪ್ರಗತಿಶೀಲರ ಕೆಲವು ಬರಹಗಳು ಹೀಗೆ ಆದವು. ಲೇಖಕನಾದವನು ಜೀವಿತದ ಅಗೋಚರ ಅಥವ ಗೋಚರ ಸತ್ಯಗಳ ಕುರಿತು ಎಷ್ಟೇ ಪ್ರಭಾವಿಯಾಗಿದ್ದರೂ ಸ್ಥಳೀಯತೆಯ 'ಸಂಸ್ಕೃತಿಗಳನ್ನು' ವಿಸ್ಮೃತಿಗೆ ತಳ್ಳಲಾರ.

ನವೋದಯದ ನಿಸರ್ಗತತ್ವ ಮತ್ತು ಸಾಮಾಜಿಕತೆಯನ್ನು, ಪ್ರಗತಿಶೀಲರ ಸಾಮಾಜಿಕ ಅನ್ಯಾಯ, ಕಾಮ, ನಗರಚಿತ್ರಗಳು ಮುಂತಾದ ಕೆಲಗುಣಗಳನ್ನು ಲಂಕೇಶರು ತಮ್ಮ ಕಥೆಗಳಲ್ಲಿ ಬೇರೆತನಗಳ ಚೌಕಟ್ಟಿನಲ್ಲಿ ಕಂಡರು. ಬಹುತೇಕ ಎಲ್ಲವನ್ನೂ ಮನುಷ್ಯನ ಮುಖಾಂತರ ಗಮನಿಸುವ ಲಂಕೇಶರ ಜೀವನದೃಷ್ಟಿ ಯಾವುದೇ ಒಂದು ವಿಚಾರದ ಮೇಲೆ ನಿಂತಿದ್ದರೆ ಸವಕಲು ಕಥೆಗಾರರಾಗುತ್ತಿದ್ದರು. ಉದ್ದಕ್ಕೂ ಮನುಷ್ಯನ ಆಲೋಚನೆಗಳ ಮತ್ತು ಸಮಾಜ ಪಲ್ಲಟಗಳ ಬೆನ್ನಲ್ಲಿ ನಡೆಸಿದ ಪ್ರಯೋಗಗಳು ಅವರನ್ನು ಇಲ್ಲಿಯತನಕ ತಂದು ನಿಲ್ಲಿಸಿವೆ. ಯಶವಂತ ಚಿತ್ತಾಲರು 'ಮಾಸ್ತಿ ಮೂವ್ವತ್ತು ಕತೆಗಳು' ಎಂಬ ಸಂಕಲನದ ಪ್ರಸ್ತಾವನೆಯಲ್ಲಿ ಹೀಗೆ ಹೇಳುತ್ತಾರೆ. ''ನಾವು ನವ್ಯಕ್ಕೆ ಬರುವ ಹೊತ್ತಿಗೆ ಕತೆ 'ಹೇಳು'ವ ಕಾಲ ಮುಗಿದಿತ್ತು. ಹೇಳುವುದನ್ನು ಬಿಟ್ಟು ನಾವು ಕತೆಯನ್ನು 'ಬರೆ'ಯತೊಡಗಿದ್ದವು''. ಈ ಮಾತುಗಳು ಗಂಭೀರವಾಗಿವೆ ಹಾಗೂ ಕನ್ನಡ ಕಥನ ತಂತ್ರದ ದೃಷ್ಟಿಯಿಂದಲೂ ಮುಖ್ಯವಾಗಿವೆ. ಹೇಳುವಿಕೆಯಲ್ಲಿ ಯಾವಾಗಲೂ ಮೌಖಿಕತೆ ಇರುತ್ತದೆ. ಇದೊಂದು ಜನಪದರ ರೂಢಿ.

ಚಿತ್ತಾಲರನ್ನು ಬಹುತೇಕರು ನವ್ಯ ಕಥೆಗಾರರೆಂದು ಕರೆದಿದ್ದಾರೆ. ಯಾವುದೇ ಒಬ್ಬ ಲೇಖಕನನ್ನು ಒಂದು ಕಾಲಕ್ಕೆ, ಒಂದು ಚೌಕಟ್ಟಿಗೆ ಕಟ್ಟಿಹಾಕಿದರೆ ಆತನೇ ಬೇರೊಂದು ವೇಷದಲ್ಲಿ ಬಂದು ಬಿಡಿಸಿಕೊಳ್ಳಬೇಕು. ಕೆಲವರು ಹಾಗೆ ಮಾಡಿದ್ದಾರೆ. ಇದರಿಂದಲೇ ತೇಜಸ್ವಿ, ಲಂಕೇಶ, ಚಿತ್ತಾಲರು ಇವುಗಳಿಂದ ಬಿಡಿಸಿಕೊಳ್ಳಲು ತಾವೇ ತಮ್ಮ ಕಥನಗಳ ತಾತ್ವಿಕತೆಗಳ ಕುರಿತು ಬರೆಯಬೇಕಾಯಿತು. ಲಂಕೇಶರು ತಮ್ಮ ಕಥನದ ಉದ್ದಕ್ಕೂ ಫಾರಂ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳದಿದ್ದರೂ, ಕಥನದಲ್ಲಿ ಫಾರಂ ಬಹಳ ಮುಖ್ಯವೆಂದು ತಮ್ಮ ಒಂದು ಸಂದರ್ಶದಲ್ಲಿ ಹೇಳುತ್ತಾರೆ. (ಆಕಾಶವಾಣಿಯಲ್ಲಿ ಬಸವರಾಜ ಸಾದರ ಅವರು ನಡೆಸಿದ ಸಂದರ್ಶನದಲ್ಲಿ). ಫಾರಂ ಘಟನೆಗಳನ್ನು ಕೆಡಿಸಲು ಬರಲಾರವು; ಅದು ಮನುಷ್ಯರ ಮನುಸ್ಸುಗಳನ್ನು ಲೀಲಾಜಾಲವಾಗಿ ಬಟಾಬಯಲ್ಲಿ ಹರಿದಾಡಲು ಬಿಡಬೇಕು; ಹೀಗೆ ಹರಿದಾಡುವಾಗ ಆಶಯಗಳನ್ನು ಭಗ್ನಗೊಳಿಸಬಾರದು. ಲಂಕೇಶರ ಕಥನ ಪ್ರಯೋಗದಲ್ಲಿ ಆಳವಾದ ಚಿಂತನೆ ಮತ್ತು ಚಾಲಾಕಿತನಗಳಿವೆ. ಅವರ ಆರಂಭದ ಕಥೆಗಳಲ್ಲಿ ಘಟನೆ ಮತ್ತು ವಿವರ ಇಷ್ಟೇ ಮುಖ್ಯವಾಗುತ್ತವೆ. ಕ್ರಮೇಣ, ಅವುಗಳಿಗೊಂದು ಗಟ್ಟಿಯಾದ ತಳಹದಿಯನ್ನು ಭಾಷೆಯ ಮೂಲಕ ರೂಪಿಸಿಕೊಳ್ಳುತ್ತಾರೆ. ಹಲವು ಪಾತ್ರಗಳನ್ನು ಸೃಷ್ಟಿಸಿ ಆಶಯಗಳ ಮೂಲಕ ಸ್ಪಷ್ಟವಾದ ಆಕಾರಗಳನ್ನು ನಿರ್ಮಿಸಿಕೊಳ್ಳುತ್ತಾರೆ. ಬಹಳ ಮುಖ್ಯವಾದ ವಿಚಾರವೆಂದರೆ, ಅವರ ಮೊದಲ